ದಿನಾಂಕ 23.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : 2ನೇ ಎದುರುದಾರರ ಪರ ಶ್ರೀ.ಜೆ ಎಸ್ ವಕೀಲರಿಂದಃ

ಅಪಘಾತ ನನಗೆ ದಿ 22.11.2022 ರಲ್ಲಿ ಆಗಿರುತ್ತದೆ. ಆಗ ನಾನು ಹಲಗೂರಿನಿಂದ ಬಿ ವಿ ಹಳ್ಳಿಗೆ ಹೋಗುತ್ತಿದ್ದೆ. ಆಗ ನಾನು ನನ್ನದೆ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಅದು ಈಗಲೂ ನನ್ನ ಹತ್ತಿರ ಇದೆ. ಆದರ ಸಂಖ್ಯೆ ಕೆಎ-42-ಇಸಿ-4321 ಆಗಿದೆ. ಆ ದಿನ ಗಾಡಿಯನ್ನು ನಾನೇ ಓಡಿಸುತ್ತಿದ್ದೆ. ವಾಹನ ಓಡಿಸಲು ನನಗೆ ಡಿ ಎಲ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದ ಎಂದರೇ ಹೌದು. ನನ್ನ ವಾಹನಕ್ಕೆ ಸಂಬಂದ ಪಟ್ಟಂತೆ Insurance, ಹೊಗೆ ತಪಾಸಣೆ ಪತ್ರವನ್ನು ಹಾಜರುಪಡಿಸಬಲ್ಲೆ. ಅಪಘಾತವನ್ನು ಟಿಪ್ಪರ್ ಲಾರಿ ಅತೀ ವೇಗವಾಗಿ ಬಂದು ನನ್ನ ಗಾಡಿಯ ಮುಂಬದಿಗೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತವಾಗಿದೆ. ತಕ್ಷಿರು ಸ್ಥಳ ನೇರ ರಸ್ತೆ ಎಂದರೇ ಹೌದು. ಟಿಪ್ಪರ್ ಲಾರಿ ಬರು ವುದನ್ನು ನಾನು 5 ಅಡಿ ದೂರದಿಂದ ನೋಡಿದ್ದೇನೆ. ಅಪಘಾತ ಬೆಳಗಿನ ಹೊತ್ತು ಆಗಿರುತ್ತದೆ. ಆ ಸಮಯದಲ್ಲಿ ತುಂಬಾ ವಾಹನಗಳು ಓಡಾಡುತ್ತಿದ್ದೇವು ಎಂದರೇ ಹೌದು. ಮುಂದೆ ಬರುತ್ತಿದ್ದ ವಾಹನ ನೋಡಿ ಪಕ್ಕಕ್ಕೆ ಹೋಗಬಹುದಾಗಿತ್ತು ಎಂದರೇ ಎಡ ಬದಿಯಲ್ಲಿ ಹೋಗುತ್ತಿದ್ದೆ.

2. ಅಪಘಾತವಾದ ನನ್ನ ಗಾಡಿಯ ಮುಂಭಾಗ ಜಖಂ ಆಗಿದ್ದು. ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದೆ. ಪ್ರಕರಣಕ್ಕೆ ಸಂಬಂದ ಪಟ್ಟಂತೆ ನನ್ನ ಅಣ್ಣ ಪ್ರಮೋದ ದೂರನ್ನು ಕೊಟ್ಟಿದ್ದೇನೆ. ಟಿಪ್ಪರ್ ಲಾರಿಗೆ ಯಾವುದಾದರೂ ಹಾನಿ ಆಗಿತ್ತ ಎಂದರೇ ಪ್ರಜ್ಞೆ ತಪ್ಪಿತ್ತು. ನನ್ನನ್ನು ಮೊದಲು ಹಲಗೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಅಲ್ಲಿಂದ ನನ್ನ ತಂದೆ ಮತ್ತು ಅಣ್ಣ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು 3 ದಿನ ಇದ್ದೆ. ಆಗ ಅಪಘಾತದ ಬಗ್ಗೆ ಹೇಳಿದ್ದೇನೆ. ಆಗ ನಿಮ್ಮ ಹೇಳಿಕೆಯನ್ನು ಪೋಲಿಲಸರು ದಾಖಲು ಮಾಡಿಕೊಂಡಿದ್ದಾರ ಎಂದರೇ ಇಲ್ಲ. ನಾನೇ ಹೋಗುತ್ತಿದ್ದ ವಾಹನ ಬಿದ್ದು ಅಪಘಾತ ಆಗಿದೆ ಎಂದರೇ ಸುಳ್ಳು. ಆಸ್ಪತ್ರೆಯಲ್ಲಿ ಹೋಗುತ್ತಿದ

ವಾಹನದಿಂದ ಕೆಳಗಡೆ ಬಿದ್ದು ಗಾಯ ಆಗಿದೆ ಎಂದು ಹೇಳಿದ್ದಾರೆ ಎಂದರೇ ಇಲ್ಲ. ಹೋಗುತ್ತಿದ್ದ ವಾಹನದಿಂದ ಕೆಳಗಡೆ ಬಿದ್ದು ಪರಿಹಾರ ಪಡೆಯಲು ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ನನಗೆ ಯಾವುದೆ ರೀತಿ ಶಸ್ತ್ರಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೇ ಇಲ್ಲ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಆಗಾಗ ಇದೆ. ಆದರೆ ಅಪಘಾತವಾದಗ ಮದ್ಯಪಾನ ಮಾಡಿರಲಿಲ್ಲ.

3. ಹಲಗೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಾಗ ಮದ್ಯಪಾನ ಮಾಡಿದ್ದೆ ಎಂದು ವೈದ್ಯರು ತಿಳಿಸಿದ್ದರು ಎಂದರೇ ಇಲ್ಲ. ವೈದ್ಯರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೇ ಇದೆಯಾ ಎಂದರೇ ಯಾರು ನನಗೆ ಗೊತ್ತಿಲ್ಲ. ನನಗೆ ಯಾವುದೇ ರೀತಿಯ ತೀವ್ರ ಸ್ವರೂಪದ ಗಾಯ ಆಗಿರಲ್ಲಿಲ್ಲ. ಸಾಮಾನ್ಯ ರೀತಿಯ ಗಾಯ ಆಗಿದೆ ಎಂದರೇ ಸರಿಯಲ್ಲ. ನಾನು ಯಾವುದೇ ರೀತಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. 6 ತಿಂಗಳು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವೈದ್ಯರು ಹೇಳಿದ್ದಾರ ಎಂದರೇ ಹೌದು. ಅಪಘಾತ ಆಗುವ ವೇಳೆ ಹೆಲ್ಮೆಟ್ ಹಾಕಿರಾದ ಕಾರಣ ಅಪಘಾತ ಆಗಿದೆ ಎಂದರೇ ಸರಿಯಲ್ಲ. ರೂ 3 ಲಕ್ಷ ಆಸ್ಪತ್ರೆಯಲ್ಲಿ ಖರ್ಚಾಗಿದೆ ಎಂದು  ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಅಪಘಾತವಾದಾಗ ನನಗೆ 27 ವರ್ಷ ವಯಸ್ಸು. ಅದರ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೇ ಸರಿಯಲ್ಲ. ನಾನು ಚಾಲಕನಾಗಿ ಕೆಲಸ 30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು. ಈಗಲೂ ಮಾಡುತ್ತಿದ್ದೀರ ಎಂದರೇ ನಾನು ಚಾಲಕ ಅಲ್ಲ. ಅಪಘಾತ ನನ್ನ ತಪ್ಪಿಂದ ಆಗಿದ್ದರು ಸಹ ಪರಿಹಾರ ಪಡೆಯಲು  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)